www.varthabharati.in
ಜನದನಿಯ ಸಾರಥಿ
epaper.varthabharati.in

# ವಾರ್ತಾ ಭಾರತಿ

ಸತ್ಯ ಎಲ್ಲರಿಗಾಗಿ

◆ ಬೆಂಗಳೂರು ◆ ಮಂಗಳೂರು ◆ ಶಿವಮೊಗ್ಗ

9 ಜುಲೈ 2022
ಶನಿವಾರ

VARTHABHARATHI KANNADA DAILY

REGD.NO: KA/BGW-1628/2021-23 RNI NO. KAR KAN/2008/31737

● ಸಂಪುಟ 15 ● ಸಂಚಿಕೆ 129 ● ಬೆಂಗಳೂರು ● ಪುಟ 10 ● ಬೆಲೆ ರೂ. 4.00

ವಾರ್ತಾಭಾರತಿ
YouTube ಚಾನಲ್
Subscribe ಮಾಡಿ
ಬೆಲ್ ಐಕನ್ ಒತ್ತಿ
ಪ್ರತಿದಿನ ವಿಶಿಷ್ಟ ವಿಡಿಯೋಗಳನ್ನು ವೀಕ್ಷಿಸಿ

ಫೋನ್ ಕದ್ದಾಲಿಕೆ

## ಮಾಜಿ ಮುಂಬೈ ಪೊಲೀಸ್ ಆಯುಕ್ತ, ಎನ್‌ಎಸ್‌ಇ ಮಾಜಿ ಮುಖ್ಯಸ್ಥರ ವಿರುದ್ಧ ಸಿಬಿಐನಿಂದ ಪ್ರಕರಣ ದಾಖಲು


ಸಂಜಯ್ ಪಾಂಡೆ


ಚಿತ್ರಾ ರಾಮಕೃಷ್ಣ


ರವಿ ನಾರಾಯಣ

ಹೊಸದಿಲ್ಲಿ, ಜು.8: ಕೋ-ಲೊಕೇಷನ್ ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನ ನೌಕರರ ದೂರವಾಣಿಗಳನ್ನು ಕದ್ದಾಲಿಸಿದ ಆರೋಪದಲ್ಲಿ ಮಾಜಿ ಮುಂಬೈ ಪೊಲೀಸ್ ಆಯುಕ್ತ ಸಂಜಯ್ ಪಾಂಡೆ ಹಾಗೂ ಎನ್‌ಎಸ್‌ಇ ಮಾಜಿ ಮುಖ್ಯಸ್ಥರಾದ ಚಿತ್ರಾ ರಾಮಕೃಷ್ಣ ಮತ್ತು ರವಿ ನಾರಾಯಣ ವಿರುದ್ಧ ಸಿಬಿಐ ಶುಕ್ರವಾರ ಹೊಸ ಪ್ರಕರಣವನ್ನು ದಾಖಲಿಸಿದೆ.

ಕೋ-ಲೊಕೇಷನ್ ಹಗರಣದಲ್ಲಿ ಚಿತ್ರಾ ಮತ್ತು ರವಿ ನಾರಾಯಣ ವಿರುದ್ಧ ಈಗಾಗಲೇ ಪ್ರಕರಣ ದಾಖಲಾಗಿದೆ. ಚಿತ್ರಾ ಮಾರ್ಚ್‌ನಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಪಾಂಡೆ 2001ರಲ್ಲಿ ಐಸೆಕ್ ಸೆಕ್ಯೂರಿಟಿಸ್ ಕಂಪೆನಿಯನ್ನು ಸ್ಥಾಪಿಸಿದ್ದು, ಇದನ್ನು ಎನ್‌ಎಸ್‌ಇ ನೌಕರರ ವಿದ್ಯುನ್ಮಾನ ಕಣ್ಗಾವಲಿಗೆ ಬಳಸಲಾಗಿತ್ತು ಎಂದು ಸಿಬಿಐ ಆರೋಪಿಸಿದೆ.

ಕೇಂದ್ರ ಗೃಹ ಸಚಿವಾಲಯದ ನಿರ್ದೇಶದ ಮೇರೆಗೆ ಹೊಸ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಂಡೆ ಆಸ್ತಿಗಳು ಸೇರಿದಂತೆ ಮುಂಬೈನ ಎಂಟು, ಪುಣೆಯ ಎರಡು, ರಾಷ್ಟ್ರ ರಾಜಧಾನಿ ಪ್ರದೇಶ (ಎನ್‌ಸಿಆರ್)ದ ಐದು ಹಾಗೂ ಲಕ್ನೊ, ಕೋಟಾ ಮತ್ತು ಚಂಡೀಗಡದ ತಲಾ ಒಂದು ಸ್ಥಳಗಳಲ್ಲಿ ಸಿಬಿಐ ತಂಡಗಳು ಶುಕ್ರವಾರ ಶೋಧ ಕಾರ್ಯಾಚರಣೆಗಳನ್ನು ನಡೆಸಿವೆ.

2010 ಮತ್ತು 2015ರ ನಡುವಿನ ಅವಧಿಯಲ್ಲಿ ಎನ್‌ಎಸ್‌ಇಯಲ್ಲಿ ಭದ್ರತಾ ಆಡಿಟ್‌ಗಳನ್ನು ನಡೆಸುವ ಹೊಣೆಯನ್ನು ವಹಿಸಿಕೊಂಡಿದ್ದ ಸಂಸ್ಥೆಗಳಲ್ಲಿ ಐಸೆಕ್ ಒಂದಾಗಿದ್ದು, ಇದೇ ಅವಧಿಯಲ್ಲಿ ಕೋ-ಲೊಕೇಷನ್ ಹಗರಣ ನಡೆದಿತ್ತು. ಎನ್‌ಎಸ್‌ಇಯ ಸರ್ವರ್‌ಗಳನ್ನು ಅಕ್ರಮವಾಗಿ ಪ್ರವೇಶಿಸಲಾಗುತ್ತಿದೆ ಎಂಬ ಬಗ್ಗೆ ಐಸೆಕ್ ಅದಕ್ಕೆ ಮಾಹಿತಿಯನ್ನು ನೀಡಿರಲಿಲ್ಲ ಎಂದು ಸಿಬಿಐ ಆರೋಪಿಸಿದೆ.

## ‘ಆಲ್ಟ್ ನ್ಯೂಸ್’ನ ಪತ್ರಕರ್ತನಿಗೆ ಸುಪ್ರೀಂನಿಂದ 5 ದಿನಗಳ ಮಧ್ಯಂತರ ಜಾಮೀನು



ಹೊಸದಿಲ್ಲಿ, ಜು.8: ಮೂವರು ಹಿಂದೂ ಧಾರ್ಮಿಕ ನಾಯಕರನ್ನು “ದ್ವೇಷ ಪ್ರಚೋದಕರು” ಎಂದು ಕರೆದ ಆರೋಪದ ಕುರಿತು ಉತ್ತರಪ್ರದೇಶದ ಸೀತಾಪುರದಲ್ಲಿ ದಾಖಲಿಸಿದ ಪ್ರಕರಣದಲ್ಲಿ ‘ಆಲ್ಟ್ ನ್ಯೂಸ್’ನ ಸಹ ಸ್ಥಾಪಕ ಮುಹಮ್ಮದ್ ಝುಬೈರ್‌ಗೆ ಸುಪ್ರೀಂ ಕೋರ್ಟ್ ಶುಕ್ರವಾರ ಐದು ದಿನಗಳ ಮಧ್ಯಂತರ ಜಾಮೀನು ನೀಡಿದೆ.

ಆದರೆ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ ಆರೋಪಕ್ಕೆ ಸಂಬಂಧಿಸಿ ದಿಲ್ಲಿ ಪೊಲೀಸರು ದಾಖಲಿಸಿದ ಪ್ರಕರಣದಲ್ಲಿ ಇದುವರೆಗೆ ಜಾಮೀನು ದೊರಕದೇ ಇರುವುದರಿಂದ ಅವರು ಸದ್ಯಕ್ಕೆ ಕಾರಾಗೃಹದಲ್ಲೇ ಇರಬೇಕಾಗುತ್ತದೆ.

ಟ್ವೀಟ್ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಲಾಗಿದೆ ಎಂದು ಆರೋಪಿಸಿ ಸೀತಾಪುರದಲ್ಲಿ ದಾಖಲಿಸಲಾದ ಎಫ್‌ಐಆರ್ ಅನ್ನು ರದ್ದುಗೊಳಿಸಲು ಅಲಹಾಬಾದ್ ಉಚ್ಚ ನ್ಯಾಯಾಲಯ ನಿರಾಕರಿಸಿರುವುದನ್ನು ಪ್ರಶ್ನಿಸಿ ಝುಬೈರ್ ಮುಹಮ್ಮದ್ ಅವರು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದರು. 8ನೇ ಪುಟಕ್ಕೆ

# ಜಪಾನ್ ಮಾಜಿ ಪ್ರಧಾನಿ ಶಿಂರ್ಝೊ ಅಬೆ ಹತ್ಯೆ

**ಟೋಕಿಯೊ, ಜು.8: ಜಪಾನಿನ ಮಾಜಿ ಪ್ರಧಾನಿ ಶಿಂರ್ಝೊ ಅಬೆ (67) ಅವರನ್ನು ಶುಕ್ರವಾರ ಗುಂಡಿಕ್ಕಿ ಹತ್ಯೆಗೈಯಲಾಗಿದೆ. ಕಶಿಹರ ನಗರದ ನಾರಾ ಪ್ರದೇಶದಲ್ಲಿ ಸ್ಥಳೀಯ ಕಾಲಮಾನ ಬೆಳಗ್ಗೆ 11:30ರ ಸುಮಾರಿಗೆ ಈ ಘಟನೆ ನಡೆದಿದೆ. ಹಂತಕನನ್ನು ಬಂಧಿಸಲಾಗಿದ್ದು, ಆತನ ನಿವಾಸದಲ್ಲಿ ಸ್ಫೋಟಕಗಳು ಪತ್ತೆಯಾಗಿವೆ. ಗುಂಡು ಅಬೆಯವರ ಹೃದಯವನ್ನು ಭೇದಿಸಿತ್ತು ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.**

ರವಿವಾರ ನಡೆಯಲಿರುವ ಮೇಲ್ಮನೆ ಚುನಾವಣೆಗೆ ಮುನ್ನ ನಾರಾದ ಬೀದಿಬದಿಯಲ್ಲಿ ಪ್ರಚಾರ ಭಾಷಣ ಮಾಡುತ್ತಿದ್ದ ಅಬೆ ಗುಂಡೇಟಿನಿಂದ ಗಾಯಗೊಂಡ ಮಾಹಿತಿ ಸಿಕ್ಕಿದ ತಕ್ಷಣ ಪ್ರಚಾರ ಕಾರ್ಯಕ್ರಮವನ್ನು ತೊರೆದು ಟೋಕಿಯೊಗೆ ಮರಳಿದ ಜಪಾನ್ ಪ್ರಧಾನಿ ಫುಮಿಯೊ ಕಿಶಿಡಾ ಅವರು, ಇದು ಸಂಪೂರ್ಣವಾಗಿ ಅಕ್ಷಮ್ಯವಾಗಿದೆ. ಈ ಕೃತ್ಯವನ್ನು ಅತ್ಯಂತ ಕಟುವಾದ ಶಬ್ದಗಳಲ್ಲಿ ಖಂಡಿಸುತ್ತೇನೆ ಎಂದು ಹೇಳಿದರು.

ಗುಂಡು ಹಾರಿಸಿದ್ದ ಶಂಕಿತ ಹಂತಕನನ್ನು ಬಂಧಿಸಲಾಗಿದೆ ಎಂದು ಮುಖ್ಯ ಸಂಪುಟ ಕಾರ್ಯದರ್ಶಿ ಹಿರೊಕಝು ಮಟ್ಸುನೊ ತಿಳಿಸಿದರು. ಹಂತಕನನ್ನು 41 ವರ್ಷದ ತೆತ್ಸುಯ ಯಮಗಾಮಿ ಎಂದು ಗುರುತಿಸಲಾಗಿದೆ ಎಂದು ಪೊಲೀಸ್ ಮೂಲಗಳನ್ನು ಉಲ್ಲೇಖಿಸಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಯಮಗಾಮಿ ನಿವಾಸದಲ್ಲಿ ಸ್ಫೋಟಕಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದರು.

ಅಬೆ ಭಾಷಣವನ್ನು ಮಾಡುತ್ತಿದ್ದಾಗ ಹಿಂದಿನಿಂದ ವ್ಯಕ್ತಿಯೋರ್ವ ಬಂದಿದ್ದ. ಮೊದಲ ಗುಂಡೇಟು ಆಟಿಕೆಯಂತೆ ಕೇಳಿ ಬಂದಿತ್ತು. ಅವರು ಕೆಳಕ್ಕೆ ಬಿದ್ದಿರಲಿಲ್ಲ ಮತ್ತು ಎರಡನೇ ಗುಂಡು ಭಾರೀ ಶಬ್ದವನ್ನು ಮಾಡಿತ್ತು. ಅದು ಹೆಚ್ಚು ಸ್ಪಷ್ಟವಾಗಿತ್ತು, ಕಿಡಿ ಮತ್ತು ಹೊಗೆ ಕಂಡುಬಂದಿದ್ದವು. ಗುಂಡೇಟಿನಿಂದ ಕುಸಿದು ಬಿದ್ದಿದ್ದ ಅಬೆ ಹೃದಯಾಘಾತಕ್ಕೂ ಒಳಗಾಗಿದ್ದು, ಸುತ್ತಲಿನ ಜನ ಅವರ ಹೃದಯಕ್ಕೆ ಪುನಃಶ್ಚೇತನಕ್ಕಾಗಿ ಮಸಾಜ್‌ನ್ನೂ ಮಾಡಿದ್ದರು ಎಂದು ಪ್ರತ್ಯಕ್ಷದರ್ಶಿ ಮಹಿಳೆಯೋರ್ವರು ತಿಳಿಸಿದರು. ಕುಸಿದು ಬಿದ್ದಿದ್ದ ಅಬೆಯವರ ಕುತ್ತಿಗೆಯಿಂದ ರಕ್ತಸ್ರಾವವಾಗುತ್ತಿತ್ತು. ಅವರನ್ನು ತಕ್ಷಣ ಕಶಿಹರ ಆಸ್ಪತ್ರೆಗೆ ಸಾಗಿಸಲಾಗಿತ್ತು ಮತ್ತು ರಕ್ತ ವರ್ಗಾವಣೆಯನ್ನೂ ಮಾಡಲಾಗಿತ್ತು ಎಂದು ಅವರ ಲಿಬರಲ್ ಡೆಮಾಕ್ರಟಿಕ್ ಪಾರ್ಟಿಯ ಪದಾಧಿಕಾರಿಯೋರ್ವರು ತಿಳಿಸಿದರು. 8ನೇ ಪುಟಕ್ಕೆ


1954-2022

### ‘ಪದ್ಮ ವಿಭೂಷಣದಿಂದ ಪ್ರಧಾನಿ ಜೊತೆ ಗಂಗಾ ಆರತಿವರೆಗೆ’ ಭಾರತದೊಂದಿಗೆ ಶಿಂರ್ಝೊ ಅಬೆಯವರ ಸಂಬಂಧ ▶9

### ಪ್ರಧಾನಿ ಮೋದಿ ಸಂತಾಪ ದೇಶದಲ್ಲಿ ಇಂದು ಶೋಕಾಚರಣೆ

ಹೊಸದಿಲ್ಲಿ, ಜು.8: ಜಪಾನ್‌ನ ಮಾಜಿ ಪ್ರಧಾನಿ ಶಿಂರ್ಝೊ ಅಬೆ ನಿಧನದ ಹಿನ್ನೆಲೆಯಲ್ಲಿ ಸಂತಾಪ ಸೂಚಕವಾಗಿ ದೇಶಾದ್ಯಂತ ಶನಿವಾರ ರಾಷ್ಟ್ರೀಯ ಶೋಕಾಚರಣೆ ನಡೆಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಘೋಷಿಸಿದ್ದಾರೆ.

ಜಗತ್ತನ್ನು ಉತ್ತಮ ಸ್ಥಳವನ್ನಾಗಿ ಮಾಡಲು ಅವರು ತಮ್ಮ ಬದುಕನ್ನೇ ಮುಡಿಪಾಗಿಟ್ಟರು. ಅವರು ಭಾರತದೊಂದಿಗೆ ಉತ್ತಮ ಒಡನಾಟ ಹೊಂದಿದ್ದರು ಎಂದು ಅವರು ಹೇಳಿದ್ದಾರೆ.

“ನನ್ನ ಹಾಗೂ ಅಬೆ ಅವರ ಗೆಳೆತನ ಹಲವು ವರ್ಷಗಳದ್ದು. ನಾನು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗಲೇ ಅವರ ಪರಿಚಯ ಇತ್ತು. ನಾನು ಪ್ರಧಾನಿಯಾದ ಬಳಿಕವೂ ಗೆಳೆತನ ಮುಂದುವರಿಯಿತು. ಆರ್ಥಿಕತೆ ಹಾಗೂ ಜಾಗತಿಕ ವ್ಯವಹಾರಗಳ ಕುರಿತ ಅವರ ತೀಕ್ಷ್ಣ ತಿಳುವಳಿಕೆ ನನ್ನ ಮೇಲೆ ಗಾಢವಾಗಿ ಪ್ರಭಾವ ಬೀರಿತ್ತು” ಎಂದು ಅವರು ಹೇಳಿದ್ದಾರೆ.

ಇತ್ತೀಚೆಗೆ ಜಪಾನ್‌ಗೆ ಭೇಟಿ ನೀಡಿದ ಸಂದರ್ಭ, ತನಗೆ ಅಬೆ ಅವರನ್ನು ಮತ್ತೊಮ್ಮೆ ಭೇಟಿಯಾಗುವ ಅವಕಾಶ ದೊರಕಿತು. ಈ ಸಂದರ್ಭ ನಾವು ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದೆವು ಎಂದು ಅವರು ಹೇಳಿದರು. 8ನೇ ಪುಟಕ್ಕೆ

## ಶಾಲಾಮಕ್ಕಳಿಗೆ ಶೂ, ಸಾಕ್ಸ್ ಹಂಚಿಕೆಗೆ 132 ಕೋಟಿ ರೂ. ಅನುಮೋದನೆ

ಮುಖ್ಯಮಂತ್ರಿ



ಬೆಂಗಳೂರು, ಜು.8: ಶಾಲಾ ಮಕ್ಕಳಿಗೆ ಶೂ ಮತ್ತು ಸಾಕ್ಸ್ ಹಂಚಿಕೆಗೆ 132 ಕೋಟಿ ರೂ. ಬಿಡುಗಡೆಗೆ ಅನುಮೋದನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದ್ದಾರೆ.

ಶುಕ್ರವಾರ ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಸರಕಾರ ಈಗಾಗಲೇ ಸಮವಸ್ತ್ರ ವಿತರಣೆಗೆ ಅನುಮೋದನೆ ನೀಡಿದೆ. ಸಮವಸ್ತ್ರ ತಯಾರಾಗಲು ಸ್ವಲ್ಪ ಸಮಯ ಹಿಡಿಯುತ್ತದೆ. ಹೀಗಾಗಿ ನಂತರ ವಿತರಣೆಯಾಗಲಿದೆ. ಈ ವಿಷಯದಲ್ಲಿ ಯಾವುದೇ ಗೊಂದಲ ಸೃಷ್ಟಿಸುವ ಅಗತ್ಯವಿಲ್ಲ ಎಂದು ವಿವರಣೆ ನೀಡಿದರು.

### ಅನುದಾನ ಬಿಡುಗಡೆ ಮಾಡಿ ಆದೇಶ

ಬೆಂಗಳೂರು, ಜು.8: ಶಿಕ್ಷಣ ಇಲಾಖೆಯು 46.37 ಲಕ್ಷ ಸರಕಾರಿ ಶಾಲಾ ಮಕ್ಕಳಿಗೆ ಉಚಿತ ಶೂ ಹಾಗೂ ಸಾಕ್ಸ್ ಅಥವಾ ಸ್ಯಾಂಡಲ್‌ಗಳನ್ನು ವಿತರಿಸಲು 132 ಕೋಟಿ ರೂ. ಅನುದಾನವನ್ನು ಮಂಜೂರು ಮಾಡಿ ಆದೇಶ ಹೊರಡಿಸಿದೆ.

ಅರ್ಹ ವಿದ್ಯಾರ್ಥಿಗಳ ಪಾದರಕ್ಷೆಗಳ ಅಳತೆ ದಾಖಲಿಸಿ, ಉತ್ತಮ ಗುಣಮಟ್ಟದ ಪಾದರಕ್ಷೆಯನ್ನು ಸ್ಥಳೀಯವಾಗಿ ಖರೀದಿಸಿ ವಿತರಣೆ ಮಾಡುವ ಜವಾಬ್ದಾರಿಯನ್ನು ಶಾಲೆಯ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ(ಎಸ್‌ಡಿಎಂಸಿ)ಗೆ ವಹಿಸಲಾಗಿದೆ. ಎಸ್‌ಡಿಎಂಸಿ ಖರೀದಿ ಸಮಿತಿಯನ್ನು ನೇಮಿಸಿಕೊಳ್ಳಬಹುದು. 8ನೇ ಪುಟಕ್ಕೆ


## ಈ.ಡಿ.ಯಿಂದ ಆ್ಯಮ್ನೆಸ್ಟಿ ಇಂಡಿಯಾಗೆ 52 ಕೋಟಿ ರೂ., ಆಕಾರ್ ಪಟೇಲ್‌ಗೆ 10 ಕೋಟಿ ರೂ. ದಂಡ


ಆಕಾರ್ ಪಟೇಲ್

ಹೊಸದಿಲ್ಲಿ, ಜು.8: ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ(ಫೆಮಾ)ಯನ್ನು ಉಲ್ಲಂಘಿಸಿದ್ದಾರೆ ಎಂಬ ಆರೋಪದಲ್ಲಿ ಅನುಷ್ಠಾನ ನಿರ್ದೇಶನಾಲಯ (ಈ.ಡಿ.)ವು ಶುಕ್ರವಾರ ಮಾನವ ಹಕ್ಕುಗಳ ಸಂಘಟನೆ ಆ್ಯಮ್ನೆಸ್ಟಿ ಇಂಡಿಯಾ ಇಂಟರ್‌ನ್ಯಾಶನಲ್‌ಗೆ 51.72 ಕೋಟಿ ರೂ. ಮತ್ತು ಸಂಘಟನೆಯ ಅಧ್ಯಕ್ಷ ಆಕಾರ್ ಪಟೇಲ್‌ಗೆ 10 ಕೋಟಿ ರೂ. ದಂಡ ವಿಧಿಸಿದೆ.

ಪಟೇಲ್ ಮತ್ತು ಆ್ಯಮ್ನೆಸ್ಟಿ ಇಂಡಿಯಾ ಇಂಟರ್‌ನ್ಯಾಶನಲ್‌ಗೆ ವಿಧಿಸಿದ ದಂಡಗಳಿಗೆ ಸಂಬಂಧಿಸಿ ನಿರ್ದೇಶನಾಲಯವು ಶೋಕಾಸ್ ನೋಟಿಸನ್ನೂ ಜಾರಿಗೊಳಿಸಿದೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಿಂದ ನುಣುಚಿಕೊಳ್ಳುವುದಕ್ಕಾಗಿ ಆ್ಯಮ್ನೆಸ್ಟಿ ಇಂಟರ್‌ನ್ಯಾಶನಲ್-ಬ್ರಿಟನ್ ತನ್ನ ಭಾರತೀಯ ಶಾಖೆಗಳ ಮೂಲಕ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮಾರ್ಗದಲ್ಲಿ ಬೃಹತ್ ಪ್ರಮಾಣದ ಹಣವನ್ನು ವಿದೇಶದಿಂದ ಭಾರತಕ್ಕೆ ರವಾನಿಸುತ್ತಿತ್ತು ಎಂಬ ಆರೋಪಗಳ ಬಗ್ಗೆ ತಾನು ತನಿಖೆ ಮಾಡಿರುವುದಾಗಿ ಅನುಷ್ಠಾನ ನಿರ್ದೇಶನಾಲಯ ಹೇಳಿಕೊಂಡಿದೆ. 8ನೇ ಪುಟಕ್ಕೆ




### ಅಮರನಾಥ ಮೇಘಸ್ಫೋಟ, ಕನಿಷ್ಠ 15 ಮಂದಿ ಸಾವು ಪುಟ 8

### ರಾಜ್ಯಸಭೆ: ನಿರ್ಮಲಾ, ಜಗ್ಗೇಶ್ ಸೇರಿದಂತೆ 27 ನೂತನ ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

